## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 555(782) |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 18.08.2025 |
| 4) | ಉತ್ತರಿಸುವವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ್ಯಾಂತ ನಡೆಸಲಾದ ಉದ್ಯೋಗ ಮೇಳಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ಉದ್ಯೋಗಗಳನ್ನು ಸೃಷ್ಠಿ ಮಾಡಲಾಗಿದೆ: (ಸಂಪೂರ್ಣ ಮಾಹಿತಿ ನೀಡುವುದು)</td><td>
<u>ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ</u><br>
ಕಳೆದ ಎರಡು ವರ್ಷಗಳಲ್ಲಿ ರಾಜ್ಯದಾದ್ಯಂತ ಒಟ್ಟು 1461 ಮಿನಿ ಉದ್ಯೋಗ ಮೇಳ/ನೇರ ಸಂದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಆ ಮೂಲಕ 20253 ಅಭ್ಯರ್ಥಿಗಳಿಗೆ ಉದ್ಯೋಗ ಆಹ್ವಾನ ಪತ್ರ ನೀಡಲಾಗಿದೆ. ವರ್ಷಾವಾರು ವಿವರ ಈ ಕೆಳಗಿನಂತಿದೆ.
<table>
<tr><th>ವರ್ಷ</th><th>ಆಯೋಜಿಸಲಾದ ಮಿನಿ ಉದ್ಯೋಗ ಮೇಳ/ನೇರ ಸಂದರ್ಸನ ಸಂಖ್ಯೆ</th><th>ಭಾಗವಹಿಸಿದ ಉದ್ದಿಮೆದಾರರ ಸಂಖ್ಯೆ</th><th>ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ</th><th>ಉದ್ಯೋಗ ಆಹ್ವಾನ ಪತ್ರ ಪಡೆದವರ ಸಂಖ್ಯೆ</th></tr>
<tr><td>2023-24</td><td>464</td><td>1317</td><td>42190</td><td>6820</td></tr>
<tr><td>2024-25</td><td>997</td><td>2627</td><td>75627</td><td>13433</td></tr>
<tr><td>ಒಟ್ಟು</td><td>1461</td><td>3944</td><td>117817</td><td>20253</td></tr>
</table>
<u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-( ಕೆ.ಎಸ್.ಡಿ.ಸಿ.)</u><br>
• ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಕಳೆದ ಎರಡು ವರ್ಷಗಳಲ್ಲಿ ರಾಜ್ಯಾದ್ಯಂತ ಒಟ್ಟು 24 ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದ್ದು, 21,009 ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲಾಗಿದೆ.<br>
• ಸ್ಕಿಲ್ ಕನೆಕ್ಟ್ ಪೋರ್ಟಲ್ (ಆನ್ಲೈನ್) ಮೂಲಕ ಇದುವರೆವಿಗೂ 2,454 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ.<br>
(ವಿವರಗಳನ್ನು ಅನುಬಂಧ-1ರಲ್ಲಿ ನೀಡಿದ)<br>
<u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br>
<u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ /</u><br>
<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u><br>
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್‌ನ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ 2023-24ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 1 ಉದ್ಯೋಗ ಮೇಳವನ್ನು ಜರುಗಿಸಿ ಕೌಶಲ್ಯ ತರಬೇತಿ ಹೊಂದಿದ 3768 ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ.<br>
2024-25ನೇ ಸಾಲಿನಲ್ಲಿ ಉದ್ಯೋಗ ಮೇಳ ಆಯೋಜಿಸಿರುವ ಹಾಗೂ ಉದ್ಯೋಗ ಹೊಂದಿದವರ ವಿವರ ಅನುಬಂಧ-2ರಲ್ಲಿ ನೀಡಿದ.
</td></tr>
</table>

| | |
|---|---|
| (ಆ) ಕೌಶಲ್ಯ ಅಭಿವೃದ್ಧಿಯಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆಯಲು ಸರ್ಕಾರದ ಮುಂದಿರುವ ಯೋಜನೆಗಳಾವುವು: | <u>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-( ಕೆ.ಎಸ್.ಡಿ.ಸಿ.)</u><br><br>ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ 63088 ಅಭ್ಯರ್ಥಿಗಳಿಗೆ ವಿವಿಧ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ.<br><br>• ತರಬೇತಿದಾರ ಸಂಸ್ಥೆಯವರು / ಕೇಂದ್ರಗಳು ಸಹ ಉದ್ಯೋಗಾವಕಾಶ ಕಲ್ಪಿಸುವುದು.<br>• ಉದ್ಯೋಗ ಮೇಳಗಳನ್ನು ಆಯೋಜಿಸುವುದು.<br>• Skill Connect Portal ಮುಖೇನ ಉದ್ಯೋಗದಾತರನ್ನು ಸಂಪರ್ಕಿಸುವುದು.<br><br><u>ರಾಷ್ಟ್ರೀಯ ಜೀವನೋಪಾಯ ಅಭಿಯಾನ</u><br><u>ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM)</u><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ದೀನ್ ದಯಾಳ್ ಅಂತ್ಯೋದಯ - ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ವಳನಿಯುಕ್ತಿ ಉಪಘಟಕದಡಿ 2023-24ನೇ ಸಾಲಿನಲ್ಲಿ 18,153 ಫಲಾನುಭವಿಗಳಿಗೆ ವಿವಿಧ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗಿರುತ್ತದೆ ಹಾಗೂ ಕೌಶಲ್ಯ ತರಬೇತಿಗಳು ಮುಕ್ತಾಯಗೊಂಡಿರುತ್ತವೆ.<br><br>ಕೇಂದ್ರ ಸರ್ಕಾರವು ದಿನಾಂಕ:03.04.2023 ರ ಪತ್ರದಲ್ಲಿ ತಿಳಿಸಿರುವಂತೆ ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ವಳನಿಯುಕ್ತಿ ಉಪಘಟಕದ ಕೌಶಲ್ಯ ತರಬೇತಿ ಕಾರ್ಯಕ್ರಮ ಉಪಘಟಕವನ್ನು ಮುಕ್ತಾಯಗೊಳಿಸಿರುತ್ತಾರೆ.<br>ಸದರಿ ಅಭಿಯಾನದಡಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗುವುದು ಬಾಕಿ ಇರುತ್ತದೆ. ಅನುದಾನ ಸ್ವೀಕೃತಗೊಂಡ ನಂತರ ತರಬೇತಿ ಪಡೆದ ಫಲಾನುಭವಿಗಳಿಗೆ ಪ್ರಮಾಣೀಕರಣ ಮತ್ತು ಮೌಲ್ಯಮಾಪನ ಮಾಡಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುವುದು.<br><br>ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನವು ದಿನಾಂಕ: 30.09.2024 ರ ಅಂತ್ಯಕ್ಕೆ ಮುಕ್ತಾಯವಾಗಿರುತ್ತದೆ. ಹೊಸ ಯೋಜನೆಯಾದ ದೀನದಯಾಳ್ ಜನ್ ಆಜೀವಿಕ ಯೋಜನೆ-(ಶಹರಿ) (ಪ್ರಾಯೋಗಿಕ)ಯು ದಿನಾಂಕ:01.10.2024 ರಿಂದ 30.09.2025 ರವರೆಗೆ ಅಥವಾ ಹೊಸ ಯೋಜನೆ ಅನುಷ್ಠಾನವಾಗುವವರೆಗೆ ಇದರಲ್ಲಿ ಯಾವುದೋ ಮೊದಲೋ ಅಲ್ಲಿಯವರೆಗೆ ಮುಂದುವರೆಸಿ ಆದೇಶಿಸಲಾಗಿರುತ್ತದೆ. ಈ ಕುರಿತು ಕರಡು ಮಾರ್ಗಸೂಚಿಯು ಮಾತ್ರ ಸ್ವೀಕೃತವಾಗಿದ್ದು, ಅಂತಿಮ ಮಾರ್ಗಸೂಚಿಯು ಸ್ವೀಕೃತವಾಗಿರುವುದಿಲ್ಲ. ಹೊಸ ಮಾರ್ಗಸೂಚಿಯು ಸ್ವೀಕೃತವಾದ ನಂತರ ಅದರಂತೆ ಕ್ರಮವಹಿಸಲಾಗುವುದು.<br><br><u>ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ /</u><br><u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)</u><br>ದೀನ್‌ದಯಾಳ್ ಉಪಾಧ್ಯಾಯ-ಗ್ರಾಮೀಣ ಕೌಶಲ್ಯ ಯೋಜನೆಯಡಿ ಒಟ್ಟು 57582 ಅಭ್ಯರ್ಥಿಗಳು ತರಬೇತಿ ಪೂರ್ಣಗೊಳಿಸಿದ್ದು, 15738 ಅಭ್ಯರ್ಥಿಗಳಿಗೆ ವೇತನ ಆಧಾರಿತ ಉದ್ಯೋಗ ಒದಗಿಸಲಾಗಿದೆ.<br><br><u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-ಸಿಡಾಕ್ (CEDOK)</u><br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ರಾಜ್ಯದಲ್ಲಿ ಉದ್ಯಮಶೀಲತಾಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಉದ್ಯಮಶೀಲತಾ ಪ್ರೇರಣಾ ಶಿಬಿರಗಳು<br>2. ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು<br>3. ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು<br>4. ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು |

ಕಳೆದ ಎರಡು ವರ್ಷಗಳಲ್ಲಿ ತರಬೇತಿ ನೀಡಿದ ವಿವರ ಈ ಕೆಳಗಿನಂತಿದೆ.

| ವರ್ಷ | ಕಾರ್ಯಕ್ರಮ | ಅಭ್ಯರ್ಥಿಗಳ ಸಂಖ್ಯೆ |
|---|---|---|
| 2023-24 | 147 | 7595 |
| 2024-25 | 112 | 5417 |

(ಇ) ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವಂತ ಗುಡಿ ಕೈಗಾರಿಕೆಗಳನ್ನು ಉದ್ಯೋಗ ಕೈಗೊಳ್ಳಲು ಸರ್ಕಾರ ಯಾವ ರೀತಿ ಸಹಾಯ ಮಾಡಲಿದೆ? (ಸಂಪೂರ್ಣ ಮಾಹಿತಿ ನೀಡುವುದು)

**ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ-( ಕೆ.ಎಸ್.ಡಿ.ಸಿ)**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯಾದ್ಯಂತ ಉಚಿತ ಅಲ್ಪಾವಧಿ ಕೌಶಲ್ಯಾಧಾರಿತ . ತರಬೇತಿಯನ್ನು ಯುವಜನತೆಗೆ ಒದಗಿಸಲಾಗುತ್ತಿದ್ದು, ತರಬೇತಿಯಲ್ಲಿ ಸ್ವಂತ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗ ಕೈಗೊಳ್ಳಲು ಮಾರ್ಗದರ್ಶನ ನೀಡಲಾಗುವುದು.

**ರಾಷ್ಟ್ರೀಯ ಜೀವನೋಪಾಯ ಅಭಿಯಾನ**

**ಸಂಜೀವಿನಿ- ಕೆ ಎಸ್ ಆರ್ ಎಲ್ ಪಿ ಎಸ್ ಸಂಸ್ಥೆ /**
**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (DAY-NRLM)**

ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವಂತ ಗುಡಿ ಕೈಗಾರಿಕೆಗಳ ಉದ್ಯೋಗ ಕೈಗೊಳ್ಳಲು ಬಯಸುವ ಮಹಿಳೆಯರನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಸ್ವ-ಸಹಾಯ ಗುಂಪುಗಳಡಿ ಸಂಘಟಿಸಿ ಸದರಿಯವರು ಸ್ವಂತ ಉದ್ಯೋಗ ಕೈಗೊಳ್ಳಲು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಮೂಲಕ ಸಮುದಾಯ ಬಂಡವಾಳ ನಿಧಿ ಸಾಲ ಒದಗಿಸಲಾಗುತ್ತಿದೆ ಮತ್ತು ಹೆಚ್ಚಿನ ಸಾಲದ ಅವಶ್ಯಕತೆಗಳಿಗೆ ಬ್ಯಾಂಕ್ ಲಿಂಕೇಜ್ ಮೂಲಕ ಸಾಲ ಪಡೆಯಲು ಬೆಂಬಲ ನೀಡಲಾಗುತ್ತಿದೆ.

ಮುಂದುವರೆದು, ಈ ಕ್ಷೇತ್ರದಲ್ಲಿ ಉತ್ಪನ್ನಗಳ ಮಾರಾಟಕ್ಕೆ ತಾಲ್ಲೂಕು, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಆಯೋಜಿಸಲಾಗುವ ಮಾರಾಟ ಮೇಳಗಳಲ್ಲಿ ಮಾರುಕಟ್ಟೆ ಸೌಲಭ್ಯ ಅವಕಾಶವನ್ನು ಒದಗಿಸಲಾಗುತ್ತಿದೆ.

**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ-ಸಿಡಾಕ್ (CEDOK)**

ತರಬೇತಿ ಪಡೆದ ಅಭ್ಯರ್ಥಿಗಳಿಗೆ ತಮ್ಮದೇ ಆದ ಸ್ವಂತ ಉದ್ಯಮಗಳನ್ನು ಕೈಗೊಳ್ಳಲು ಅವರಿಗೆ ಬೆಂಬಲ ಸೇವೆ, ಮಾರ್ಗದರ್ಶನ ನೀಡಿ ಅವರು ರಾಜ್ಯ ಸರ್ಕಾರ / ಕೇಂದ್ರ ಸರ್ಕಾರದ ವಿವಿಧ ಯೋಜನೆಗಳನ್ನು ಬಳಸಿಕೊಂಡು ಸ್ವಂತ ಉದ್ಯಮಗಳನ್ನು ಪ್ರಾರಂಭಿಸಲು ಸಹಾಯ ಮಾಡಲಾಗುತ್ತಿದೆ.

ಸಂಖ್ಯೆ: ಕೌಉಜೀಇ 19 ಕೌಗುಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

ಅನುಬಂಧ-1

Statistics of the candidates Placed across various Job Fairs conducted by KSDC

| 2023-24 | | |
|---|---|---|
| Sl No | District | Candidates Placed |
| 1 | Bangalore | 9654 |
| 2 | Kalaburagi | 811 |
| 3 | Tumkur | 450 |
| Total | | 10915 |

| 2024-25 | | |
|---|---|---|
| Sl.No | District | Candidates Placed |
| 1 | Bagalkote | 215 |
| 2 | Bangalore Urban | 421 |
| 3 | Bangalore Rural | 1097 |
| 4 | Bellary | 343 |
| 5 | Bidar | 8 |
| 6 | Chikmangalore | 547 |
| 7 | Chitradurga | 272 |
| 8 | Davangere | 1310 |
| 9 | Dharwad | 532 |
| 10 | Gadag | 827 |
| 11 | Haveri | 446 |
| 12 | Koppal | 569 |
| 13 | Mandya | 3 |
| 14 | Mysore | 288 |
| 15 | Ramnagara | 618 |
| 16 | Raichur | 693 |
| 17 | Shimoga | 324 |
| 18 | Tumkur | 484 |
| 19 | Udupi | 1097 |
| Total | | 10094 |

| Sl No | Skill Connect Portal Data from June 2023 - June 2025<br>from KSCP operations Unit | |
|---|---|---|
| 1 | Employers Onboarded | 1038 |
| 2 | Job Postings | 109448 |
| 3 | Candidates Registered | 121618 |
| 4 | Hirings | 2454 |

Padma S
(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ-2

**ದೀನ್ ದಯಾಳ್ ಗ್ರಾಮೀಣಾಭಿವೃದ್ಧಿ ಕೌಶಲ್ಯ ಯೋಜನೆಯಡಿ 2024-25ನೇ ಸಾಲಿನಲ್ಲಿ ಉದ್ಯೋಗ ಮೇಳ ಆಯೋಜಿಸಿರುವ ಹಾಗೂ ಉದ್ಯೋಗ ಹೊಂದಿದವರ ವಿವರ**

| ಕ್ರ.ಸಂ | ಜಿಲ್ಲೆಗಳ ಹೆಸರು | ಆಯೋಜಿಸಲಾದ ಉದ್ಯೋಗ ಮೇಳಗಳ ಸಂಖ್ಯೆ | ಉದ್ಯೋಗ ಹೊಂದಿದ ಅಭ್ಯರ್ಥಿಗಳ ಒಟ್ಟು ಸಂಖ್ಯೆ |
|---|---|---|---|
| 1 | ಬಳ್ಳಾರಿ | 1 | 832 |
| 2 | ಬೆಂಗಳೂರು | 1 | 212 |
| 3 | ಬೀದರ್ | 1 | 380 |
| 4 | ಚಾಮರಾಜನಗರ | 1 | 411 |
| 5 | ಚಿಕ್ಕಮಗಳೂರು | 1 | 780 |
| 6 | ಚಿತ್ರದುರ್ಗ | 1 | 272 |
| 7 | ದಾವಣಗೆರೆ | 1 | 1300 |
| 8 | ಧಾರವಾಡ | 1 | 532 |
| 9 | ಗದಗ | 1 | 927 |
| 10 | ಕೊಪ್ಪಳ | 1 | 550 |
| 11 | ಮೈಸೂರು | 1 | 280 |
| 12 | ರಾಯಚೂರು | 1 | 693 |
| 13 | ಶಿವಮೊಗ್ಗ | 1 | 324 |
| 14 | ಉತ್ತರ ಕನ್ನಡ | 1 | 750 |
| ಒಟ್ಟು | | **14** | **8243** |

(ಪದ್ಮ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ